## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 98 (828) |
| ಸದಸ್ಯರ ಹೆಸರು | : | ಶ್ರೀ ಟಿ.ಎ.ಶರವಣ |
| ಉತ್ತರಿಸುವ ದಿನಾಂಕ | : | 11.03.2020 |
| ಉತ್ತರಿಸುವ ಸಚಿವರು | : | ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ | Reply |
|---|---|---|---|
| ಅ | ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ 2019-20ನೇ ಸಾಲಿನಲ್ಲಿ ಮೀಸಲಿರಿಸಿದ ಅನುದಾನ ಎಷ್ಟು; (ಎಸ್.ಸಿ.ಪಿ/ಟಿ.ಎಸ್.ಪಿ ಯ ಪ್ರತ್ಯೇಕ ವಿವರ ನೀಡುವುದು;) | 2019-20ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ರಡಿ ಅನುದಾನ (ಪರಿಷ್ಕೃತ) ಹಂಚಿಕೆಯ ವಿವರಗಳು ಕೆಳಕಂಡಂತಿವೆ:<br>ಎಸ್.ಸಿ.ಪಿ. ಅಡಿ – ರೂ.19542.11 ಕೋಟಿಗಳು<br>ಟಿ.ಎಸ್.ಪಿ. ಅಡಿ –ರೂ.7910.65 ಕೋಟಿಗಳು<br>ಒಟ್ಟು –ರೂ.27452.76 ಕೋಟಿಗಳು. | Budget allocation (Revised Estimate) for SCSP/TSP in 2019-20 is as follows.<br>SCSP - Rs.19542.11 crs.<br>TSP - Rs. 7910.65 crs.<br>Total - Rs. 27452.76 crs. |
| ಆ | ಸದರಿ ಮೀಸಲಿರಿಸಿದ ಅನುದಾನದಲ್ಲಿ ಪ್ರಸಕ್ತ ಸಾಲಿಗೆ ಬಳಕೆ ಮಾಡಲಾದ ಅನುದಾನದ ಶೇಕಡ ಪ್ರಮಾಣ ಎಷ್ಟು; | ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ರಡಿ ಫೆಬ್ರವರಿ 2020 ರ ಅಂತ್ಯಕ್ಕೆ ಬಳಕೆ ಮಾಡಲಾದ ಅನುದಾನದ ಶೇಕಡ ಪ್ರಮಾಣ ಶೇ.74% ಆಗಿರುತ್ತದೆ. | At the end of February-2020, the expenditure is 74%. |
| ಇ | ವರ್ಷಾಂತ್ಯದಲ್ಲಿ ವೆಚ್ಚ ಮಾಡಲಾಗದೇ ಉಳಿಯುವ ಅನುದಾನ ಬಳಕೆಗೆ ಇಲಾಖೆಯು ಕಂಡುಕೊಂಡ ಬದಲಿ ಮಾರ್ಗೋಪಾಯದ ಕ್ರಮಗಳಾವುವು; | ಕೆಲವು ಯೋಜನೆಗಳಲ್ಲಿ ನಿಗದಿತ ಅನುದಾನವು ಬಳಕೆಯಾಗದೇ ಇದ್ದಲ್ಲಿ, ಆ ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಹೆಚ್ಚಿನ ಬೇಡಿಕೆ ಇರುವ ಯೋಜನೆಗಳಿಗೆ ಮರುಹಂಚಿಕೆ ಮಾಡಿ ವಿನಿಯೋಗಿಸಲಾಗುತ್ತಿದೆ.<br><br>ಕೆಲವು ಕಾರಣಗಳಿಂದ ವರ್ಷಾಂತ್ಯದಲ್ಲಿ ಬಳಕೆಯಾಗದೇ ಉಳಿಯುವ ಅನುದಾನವನ್ನು ಲೆಕ್ಕಪರಿಶೋಧನೆ ಬಳಿಕ ಮುಂದಿನ ಆರ್ಥಿಕ ವರ್ಷದತದ ನಂತರದ ವರ್ಷದ ಆಯವ್ಯಯದಲ್ಲಿ ಹೆಚ್ಚುವರಿಯಾಗಿ ಹಂಚಿಕೆ ಮಾಡಲಾಗುತ್ತಿದೆ. | Action is being taken to re-appropriate the balance amount to the schemes where the demand is more for the development of the SC/ST.<br><br>For certain reasons if the amount is unspent, after the audit it will be provided as additional amount in the budget of next to the immediately succeeding financial year. |

| | | | |
|---|---|---|---|
| ಈ | ಯಾವಯಾವ ಇಲಾಖೆಗಳು ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನ ಬಳಕೆಯಲ್ಲಿ ಕಳಪೆ ಪ್ರಗತಿಯನ್ನು ಸಾಧಿಸಿವೆ; ಅದಕ್ಕೆ ಕಾರಣಗಳೇನು; | ಈ ಕೆಳಕಂಡ 2 ಇಲಾಖೆಗಳಲ್ಲಿ ಫೆಬ್ರವರಿ 2020ರ ಅಂತ್ಯಕ್ಕೆ ಶೇ.50%ಕ್ಕಿಂತ ಕಡಿಮೆ ಪ್ರಗತಿಯಾಗಿರುತ್ತದೆ.<br><br>ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ ವಿವಿಧ ತರಬೇತಿ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿದ್ದು, ಅದರ ವೆಚ್ಚವನ್ನು ತರಬೇತಿ ಮುಗಿದ ಬಳಿಕ ಪಾವತಿಸುವ ಕಾರಣ ಪ್ರಸ್ತುತ ಪ್ರಗತಿ ಕಡಿಮೆ ಇದೆ.<br><br>ಅರಣ್ಯ ಇಲಾಖೆಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಅಡಿ ಒಟ್ಟು ರೂ.7.98 ಕೋಟಿಗಳನ್ನು ಒದಗಿಸಿದ್ದು, ಅದರ ಪೈಕಿ ರಾಷ್ಟ್ರೀಯ ಬಿದಿರು ಅಭಿಯಾನ ಕಾರ್ಯಕ್ರಮಕ್ಕೆ ಒದಗಿಸಿದ ರೂ.5.60 ಕೋಟಿಗಳು ಬಿಡುಗಡೆಯಾಗದೇ ಇರುವುದರಿಂದ, ಪ್ರಗತಿ ಕಡಿಮೆ ಇರುತ್ತದೆ. | In the following 2 departments the expenditure is below 50% as at end of February-2020.<br><br>In skill development department the expenditure is low because Various Training programmes are being implemented, the expenditure will be incurred after the completion of the training programmes.<br><br>For Forest Department Rs.7.98 crs is allocated under SCSP/TSP programme and out of which Rs.5.60 crs is not released under the National Bamboo Mission. Hence, the progress is low. |
| ಉ | ಸೂಕ್ತ ನಿರ್ದೇಶನಗಳನ್ನು ನೀಡಿದ್ದಾಗಲೂ ಅನುದಾನ ಬಳಕೆಯಲ್ಲಿ ರಾಜ್ಯವು ಹಿನ್ನಡೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕೈಗೊಂಡ ಕಠಿಣ ನಿರ್ಧಾರಗಳೇನು? | ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ಬಳಕೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಒಂದು ವೇಳೆ ಅನಿವಾರ್ಯ ಕಾರಣಗಳಿಂದ ಅನುದಾನ ಉಳಿಕೆಯಾದಲ್ಲಿ ಅದನ್ನು ಮುಂದಿನ ಆರ್ಥಿಕ ವರ್ಷದ ತದನಂತರದ ವರ್ಷದ ಆಯವ್ಯಯದಲ್ಲಿ ಹೆಚ್ಚುವರಿಯಾಗಿ ಹಂಚಿಕೆ ಮಾಡಲಾಗುತ್ತಿದೆ.<br><br>ಅಲ್ಲದೇ ಅನುಷ್ಠಾನಾಧಿಕಾರಿಗಳು ಉದ್ದೇಶ ಪೂರ್ವಕವಾಗಿ ನಿರ್ಲಕ್ಷ್ಯತೆಯಿಂದ ಅನುದಾನವನ್ನು ಬಳಕೆ ಮಾಡದೇ ಇದ್ದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು. | Action is being taken to utilize SCSP / TSP amount fully.<br><br>Due to inevitable reasons if the amount is unspent, after the audit it will be provided additionally in the budget of next to the immediately succeeding financial year.<br><br>If the amount is unspent due to willful negligence by the implementing officers, action will be taken against such officers. |

ಸಕಇ 129 ಎಸ್‌ಎಲ್‌ಪಿ 2020

(ಗೋವಿಂದ ಎಂ. ಕಾರಜೋಳ),
ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು.